SERVICE ABOVE SELF




Rotary

विश्वमित्रः

# ವಿಶ್ವಮಿತ್ರ

VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD

Rotary

Rtn. Francesco Arezzo
RI President 2025-26

Rtn. K. Palaksha
District Governor 2025-26

Rtn. Anand R.
President, Mob: 99800 93066

Rtn. Vishwas Y.
Secretary, Mob : 99800 63180

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –06 ದಿನಾಂಕ : 13–08–2025

## ದಿನಾಂಕ: 13.08.2025ರ ವಾರದ ಸಭೆ

ದಿನಾಂಕ: 13.08.2025 ರಂದು ನಮ್ಮ ರೋಟರಿ ಕ್ಲಬ್‌ನಲ್ಲಿ ವಿಶೇಷವಾಗಿ ಭಾರತದ 79ನೇ ಸ್ವಾತಂತ್ರ ಉತ್ಸವವನ್ನು ಬಹು ವಿಶಿಷ್ಟವಾಗಿ ಆಚರಿಸಲಾಯಿತು. ಅಂದು ನಾಡಿನ ಖ್ಯಾತ ಹಾಗೂ ಪ್ರಖರ ವಾಗ್ಮಿ, ಯುವಕರ ಐಕಾನ್ ಎಂದೇ ಪ್ರಸಿದ್ಧರಾಗಿರುವ, ಅಪ್ರತಿಮ ದೇಶಭಕ್ತ ಶ್ರೀ ಚಕ್ರವರ್ತಿ ಸೂಲಿಬೆಲೆಯವರು 'ಭವಿಷ್ಯದ ಭಾರತ " ಎಂಬ ವಿಚಾರವಾಗಿ ಮಾತನಾಡಿ ಎಲ್ಲರನ್ನು ಎಚ್ಚರಿಸಿದರು. ಅಂದು ವೇದಿಕೆಯಲ್ಲಿ ಮುಖ್ಯ ಅತಿಥಿಗಳೊಂದಿಗೆ ಅಧ್ಯಕ್ಷರಾದ ರೊ.ಆರ್. ಆನಂದ್, ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಉಪಸ್ಥಿತರಿದ್ದರು. ಇದು ಕೌಟುಂಬಿಕ ಸ್ನೇಹ ಮಿಲನ ಕಾರ್ಯಕ್ರಮ ವಾಗಿದ್ದು ಕ್ಲಬ್‌ನ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮಕ್ಕೆ ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ.ಎಂ. ಮಾಧವಾಚಾರ್‌ರವರು ಉಪಹಾರದ ವ್ಯವಸ್ಥೆ ಮಾಡಿದ್ದರು.






















ರೊ. ರೇಣುಕಾ ಶ್ರೀನಾಥ್‌ರವರಿಂದ 'ಜಯತಿ ಜಯತಿ ಭಾರತ ಮಾತಾ' ಎಂಬ ಗೀತೆಯ ಸುಶ್ರಾವ್ಯ ಗಾಯನದೊಂದಿಗೆ ಪ್ರಾರ್ಥನೆಯನ್ನು ಮಾಡಿದರು. ರೊ. ಎಂ.ಮಾಧವಾಚಾರ್‌ರವರು ಆಗಮಿಸಿದ್ದ ಸರ್ವರನ್ನೂ ಸ್ವಾಗತಿಸಿದರು. ನಮ್ಮ ಸಂಸ್ಥೆಯ ಮಾಜಿ ಅಧ್ಯಕ್ಷರು, ಕೊಡುಗೈ ದಾನಿಗಳೂ ಆಗಿದ್ದ ರೊ.ಆರ್.ಜಿ. ಮಂಜುನಾಥ್‌ರವರು ಇತ್ತೀಚೆಗೆ ನಿಧನರಾದರು.

## ಈ ವಾರದ ಸಭೆ

**ದಿನಾಂಕ: 20–08–2025, ಬುಧವಾರ ಸಂಜೆ 6:30**

**ಅತಿಥಿ : ವಿದ್ವಾನ್ ಶ್ರೀ ವಿನಾಯಕ ಎಂ. ಎಸ್.**

**ವಿಷಯ : ಗೌರಿ–ಗಣೇಶ ಹಬ್ಬದ ವೈಶಿಷ್ಟ್ಯತೆ**

ದಯಮಾಡಿ ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ.

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ















ಮೃತರ ಗೌರವಾರ್ಥ ಒಂದು ನಿಮಿಷದ ಮೌನವಾಚರಿಸಲಾಯ್ತು. ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಪ್ರಕಟಣೆಗಳನ್ನು ನೀಡಿದರು. ರೊ. ಲಕ್ಷ್ಮೀ ಆನಂದ್‌ರವರು ವೇದಿಕೆಗೆ ಆಗಮಿಸಿ ಹುಟ್ಟು ಹಬ್ಬದ ಶುಭಾಶಯಗಳನ್ನು ಮತ್ತು ಆ ಪ್ರಯುಕ್ತ ಅಧ್ಯಕ್ಷರಿಂದ ನೆನಪಿನ ಕಾಣಿಕೆ ಸ್ವೀಕರಿಸಿದರು. ಶ್ರೀಮತಿ ವಾಗ್ದೇವಿ ಜೋಯ್ಸ್‌ರವರಿಂದ 'ಮೇರೆ ವತನ ಕೆ ಲೋಗೊ' ಪ್ರಸಿದ್ಧ ಹಾಡನ್ನು ಸುಶ್ರಾವ್ಯವಾಗಿ ಮೂಡಿ ಬಂತು. ಸರ್ವರಿಂದ ದೇಶ ಭಕ್ತಿಗಾಯನ ಹಾಗೂ ರೊ.ವೈ.ವಿ. ವೆಂಕಟರಮಣ ಜೋಯ್ಸ್‌ರವರಿಂದ ಭಾರತ ಮಾತಾ ಕಿ ಜೈ ಉದ್ಘೋಷವಾಯಿತು. ಇದೇ ಸಂದರ್ಭದಲ್ಲಿ ರೊ.ಎಸ್.ಜಿ. ಗೋಪಾಲ್‌ರವರು ಮಾತನಾಡಿ, ನೆಹರೂರವರು ಶಿವಮೊಗ್ಗೆಗೆ ಬಂದಾಗ ಅವರ ಸಹೋದರರಾದ ಶಿವಮೊಗ್ಗ ಸುಬ್ಬಣ್ಣರವರು ವೇದಿಕೆಯಲ್ಲಿ ಹಾಡಿದಾಗ ಆದ ಸ್ವಾರಸ್ಯಕರ ಘಟನೆಯೊಂದನ್ನು ವಿವರಿಸಿದರು. ರೊ. ಸುನೀತಾ ಶ್ರೀಧರ್‌ರವರು ಅಂದು ಮುಖ್ಯ ಅತಿಥಿ ಚಕ್ರವರ್ತಿ ಸೂಲಿಬೆಲೆಯವರ ಕಿರುಪರಿಚಯವನ್ನು ಮಾಡಿದರು. ಚಕ್ರವರ್ತಿ ಸೂಲಿಬೆಲೆಯವರು ದೀಪ ಬೆಳಗಿ ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಿದರು. ಇವರೊಂದಿಗೆ ಅಧ್ಯಕ್ಷರಾದ ರೊ.ಆರ್. ಆನಂದ, ಕಾರ್ಯದರ್ಶಿ ರೊ. ವಿಶ್ವಾಸ್ ಎಲಬುರ್ಗಿ ಮತ್ತು ರೊ. ಸುನೀತಾ ಶ್ರೀಧರ್‌ರವರು ಸಹ ದೀಪ ಬೆಳಗಿಸಿದರು.

ಅಂದಿನ ಮುಖ್ಯ ಅತಿಥಿಗಳಾದ ಶ್ರೀ ಚಕ್ರವರ್ತಿ ಸೂಲಿಬೆಲೆಯವರು ಯಾವುದೇ ಪೀಠಿಕೆಯಿಲ್ಲದೇ ನೇರವಾಗಿ ವಿಷಯದ ಬಗ್ಗೆ ಮಾತನಾಡುತ್ತಾ, ಭಾರತಕ್ಕೆ ಸ್ವಾತಂತ್ರ್ಯ ಬಂದ 78 ವರ್ಷಗಳಲ್ಲಿ ಗಳಿಸಿದ್ದೇನು ? ಎಂಬ ವಿಚಾರವನ್ನು ಪ್ರಸ್ತಾಪಿಸಿ, ಇಂದು ಸಂಭ್ರಮಿಸುತ್ತಿದ್ದೇವೆ. ಆದರೆ ವಿಭಜನೆಯಾದಾಗ ಅನೇಕರು ಮನೆಗಳನ್ನು ಕಳೆದುಕೊಂಡರು, ಗಂಡ, ಮಕ್ಕಳನ್ನು ಕಳೆದುಕೊಂಡರು, ಅತ್ಯಾಚಾರಕ್ಕೆ ಒಳಗಾದರು. ಡಿಸ್‌ಪ್ಲೇಸ್‌ಗಳು ನಡೆದವು. ಬಾಬಾ ಸಾಹೇಬ್ ಅಂಬೇಡ್ಕರ್‌ರವರು ದೂರದೃಷ್ಟಿಯಿಟ್ಟುಕೊಂಡೇ ಅಂದು ಹೇಳಿದ್ದರು. ಇಲ್ಲಿನ ಒಂದೇ ಒಂದು ಮುಸ್ಲಿಮರು ಭಾರತದಲ್ಲಿರಬಾರದು. ಅಲ್ಲಿನ ಒಂದೇ ಒಂದು ಹಿಂದೂ ಅಲ್ಲಿರಬಾರದು ಎಂದು. ಆ ಕಡೆಯವರು ಈ ಕಡೆ ಬರಲಿ, ಈ ಕಡೆಯಿರುವವರು ಆ ಕಡೆಗೆ ಹೋಗಲಿ ಸ್ಪಷ್ಟವಾಗಿ ಹೇಳಿದ್ದರು. ಈಗ ಜಗತ್ತಿನ ಎದುರು ನಿಂತಿರುವುದೇ ನಮ್ಮ ಸಂವಿಧಾನ. ಸ್ವಾತಂತ್ರ ಬಂದ ಸಂದರ್ಭದಲ್ಲಿ ಎಡ್ವರ್ಡ್ ಜನ್ನಿತ್ ಎಂಬುವವರಿಂದ ಸಂವಿಧಾನವಾಗಬೇಕೆಂದು ಅಭಿಪ್ರಾಯ ಬಂದಾಗ ಅದನ್ನು ಅಲ್ಲಗೆಳೆದ ಮಹಾತ್ಮ ಗಾಂಧೀಜಿಯವರು ಅವರಿಂದಲೇ ಸ್ವಾತಂತ್ರ್ಯ ಪಡೆದು ಅವರಿಂದಲೇ ಹೇಳಿಸಿಕೊಳ್ಳಬೇಕಾ ಎನ್ನುತ್ತಾ ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಹೆಸರನ್ನು ಸೂಚಿಸಿದರು. ಸಂವಿಧಾನದ ಸಭೆಗಳು ಸುದೀರ್ಘವಾಗಿತ್ತು. ಕೇವಲ ಒಂದು "ದಿ" ಎಂಬ ಅಕ್ಷರ ಇರುವ ಇಡಬೇಕೆ ಬೇಡವೇ ಎಂಬುದರ ಬಗ್ಗೆಯೇ ಸುದೀರ್ಘ ಚರ್ಚೆಗಳಾಗಿವೆ. ಪಾಕಿಸ್ಥಾನ ಎಂಬ ದೇಶ ಹುಟ್ಟುವುದು ಬೇಡವಾಗಿತ್ತು ಎಂದಿದ್ದರು ಡಾ.ಅಂಬೇಡ್ಕರ್. ಭಾರತಕ್ಕೆ ಡಿವೈಡ್ ಎಂಬ ಗೆರೆಗಳಿವೆ. ಆದರೆ ಅವೆಲ್ಲಾ ಪ್ರಾಕೃತಿಕ ಗಡಿಗಳಲ್ಲ. ದಕ್ಷಿಣ ಭಾರತದಲ್ಲಿ ಮೂರು ಸಾಗರದ ಬೌಂಡರಿಗಳಿವೆ. ಬೇರೆ ಬೌಂಡರಿಗಳಿಗೆ ನೂರಾರು ಕೋಟಿ ಖರ್ಚು ಮಾಡುತ್ತಿದ್ದೇವೆ ಎಂದು ಚಕ್ರವರ್ತಿ ಸೂಲಿಬೆಲೆಯವರು ತಿಳಿಸಿದರು.

ಭಾರತದಲ್ಲಿ ಅಭಿವೃದ್ಧಿಯ ಬಗ್ಗೆ ಪ್ರಸ್ತಾಪಿಸಿದ ಸೂಲಿಬೆಲೆಯವರು, ಮೊದಲು ನಾವು 2ಜಿ ಹೋಗಲೇ ಕಷ್ಟಪಡಬೇಕಾಗಿತ್ತು. ಆದರೆ ಈಗ 3ಜಿ 4ಜಿ ದಾಟಿ 5ಜಿ ಹಾಗೂ 6ಜಿ ಹೋಗುವ ಶಕ್ತಿ ನಮ್ಮ ರಾಷ್ಟ್ರಕ್ಕಿದೆ. ಮೊದಲು ನಮ್ಮ ದೇಶವನ್ನು ಹಾವಾಡಿಗರ ದೇಶವೆಂದು, ಸಾಂಬಾರು ಜನ ಎಂದು ಬಿಂಬಿಸಿದ್ದರು. ದಕ್ಷಿಣ ಸಾಂಬಾರು ಜನ. ಉತ್ತರ ಹಾವಾಡಿಗರ ನಾಡು ಎಂದು ಬಿತ್ತರಿಸಲಾಗಿತ್ತು. ನಮ್ಮ ದೇಶದಲ್ಲಿ ರೈತರು ಬಡವರು ಇರುವುದಾದ್ದರಿಂದ ಹಣದ ವ್ಯವಹಾರಕ್ಕೆ ಯುಪಿಐ ವ್ಯವಹಾರ ಜನಕ್ಕೆ ಗೊತ್ತಾಗುವುದಿಲ್ಲ. ತಂತ್ರಜ್ಞಾನದ ಅಳವಡಿಕೆ ಸಾಧ್ಯವಿಲ್ಲವೆಂದು ತಿಳಿಸಿದ್ದರು. ಅಲ್ಲದೇ ಶ್ರೀ ಪಿ. ಚಿದಂಬರಂ ಸಹ

ಹೇಳಿದ್ದರು. ಹಾಲಿ ಮುಖ್ಯಮಂತ್ರಿ ಶ್ರೀಸಿದ್ಧರಾಮಯ್ಯನಂತರವರು ಸಹ ಇದಕ್ಕೆ ಪೂರಕವಾಗಿ ಹೇಳಿದ್ದು, ಈಗ ಹಳ್ಳಿಯ ಪ್ರತಿಯೊಬ್ಬ ಹೆಣ್ಣುಮಕ್ಕಳೂ ಸಹ ಯುಪಿಐ ಬಳಸುತ್ತಾರೆ. ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ 2020 ಇವೆಲ್ಲಾ ಸಾಧ್ಯತೆ ಇದೆ ಎನಿಸುತ್ತೆ ಎಂದಿದ್ದರು. ಈಗ ಹಾಗಲ್ಲ. ಹೆಚ್ಚು ಶಸ್ತ್ರಾಸ್ತ್ರ ಆಮದುಗಾರರಾಗಿದ್ದ ನಾವು. 2013–14 ರಲ್ಲಿ 600 ಕೋಟಿ ರಫ್ತು ಮಾಡಿದ್ದೇವೆ. 2025 ರಲ್ಲಿ 25000 ಕೋಟಿ ರಫ್ತು ಹಾಗೂ 2029–30 ರಲ್ಲಿ 50000 ಕೋಟಿಯ ರಫ್ತಿನ ಗುರಿ ಹೊಂದಿದ್ದೇವೆ.

ಆಪರೇಶನ್ ಸಿಂಧೂರ – ಬಗ್ಗೆ ಮಾತನಾಡುತ್ತಾ ಮೊದಲೆಲ್ಲಾ ಎದರಾ ಎದುರು ನಿಂತು ಮಾಡಿದರೆ ಯುದ್ಧವಾಗಿತ್ತು. ಈಗ ಭೂ ಸೇನೆಯ ಕೆಲಸವನ್ನು ಕನಿಷ್ಟಗೊಳಿಸಲಾಗಿದೆ. ಭಯೋತ್ಪಾದಕರ 9 ಠಾಣ್ಯಗಳನ್ನು ಸದೆಬಡಿದು ನನ್ನ ಜಾಗದಲ್ಲಿ ನಿಂತು ಕಾದಾಡಿದರು. ಪಾಕಿಸ್ತಾನದವರ ಹೇಳಿಕೆಯಂತೆ 11 ತಾಣಗಳು ಹಾಳಾಗಿವೆ. ಒಟ್ಟಿನಲ್ಲಿ 11 + 8 ಹಾಳಾಗಿದೆ. ಗಡಿ ದಾಟಿಲ್ಲ. ಸಂದೇಶವನ್ನು ರವಾನೆ ಮಾಡಲಾಗಿದೆ. **"ಹುಷಾರಾಗಿರಿ–ಇದು ನವ ಭಾರತ"** ಎಂದು. ಪಾಕಿಸ್ಥಾನ ಎಂಥಹುದೇ ಪ್ರತಿರೋಧ ಡ್ರೋಣ್, ಮಿಸೈಲ್‌ಗಳಿಂದ ಬರಲಿ ಅವೆಲ್ಲವನ್ನು ಭಾರತ ಸಮರ್ಥವಾಗಿ ನಾಶ ಮಾಡಿ ಪಾರಮ್ಯ ಮೆರೆದಿದೆ ಎಂದರು. ಟರ್ಕಿಗೆ ನಿಮ್ಮ ಡ್ರೋಣ್ ಉಪಯೋಗವಿಲ್ಲವೆನ್ನಲಾಗಿದೆ. ಚೈನಾ ಪಾಕಿಸ್ಥಾನಕ್ಕೆ ಕೊಟ್ಟ ಶಸ್ತ್ರಾಸ್ತ್ರಗಳು ನಿಷ್ಕ್ರಿಯವಾಗಿವೆ. ಅಮೇರಿಕಾದ 5 ಫೈಟರ್ ಜೆಟ್‌ಗಳನ್ನು ಹೊಡೆದು ಅಮೇರಿಕಾಕ್ಕೆ ಎಚ್ಚರಿಕೆ ಕೊಟ್ಟೆವು. ನಾವು ಸಮರ್ಥವಾಗಿದ್ದೇವೆ ಎಂದು ಭಾರತ ತೋರಿಸಿದೆ. ಕೇವಲ 4 ದಿನದಲ್ಲಿ ಯುದ್ಧ ಮುಗಿದಿದೆ. Technically we are sound to day. ಹೊರಗಡೆಯ ಯುದ್ಧವನ್ನು ಗೆಲ್ಲುತ್ತೇವೆ. ಒಳಗಡೆ ಆಂತರಿಕ ಯುದ್ಧವನ್ನು ಗೆಲ್ಲಲು ಸಾಧ್ಯವಾಗುತ್ತಿಲ್ಲ. ಪಾಕಿಸ್ಥಾನದ ಜೆಟ್‌ಗಳು ನಾಶವಾಗಿರುವುದು ನಮ್ಮವರಿಗೆಯೇ ಹೊಟ್ಟೆಯುರಿಯುತ್ತಿದೆ. ಟ್ರಂಪ್ ಯುದ್ಧ ತಡೆದಿದ್ದೇನೆ ಎನ್ನುತ್ತಾರೆ. ಅವರು ತಡೆದಿದ್ದರೆ Tariff ಯಾಕೆ ಜಾಸ್ತಿ? Quantum Competing ನಲ್ಲಿ ಭಾರತ ಬಹಳ ಮುಂದೆ ಸಾಗಿದೆ. ಇದನ್ನು ಜಗತ್ತಿಗೆ ಸಹಿಸಲಾಗುತ್ತಿಲ್ಲ. ಪ್ರತಿ ಗಂಟೆಗೆ 4 ಸ್ಟಾರ್ಟ್ ಅಪ್‌ಗಳು ಹುಟ್ಟುತ್ತೆ. ಯುದ್ಧದ ನಂತರ ಕೆಲವು ರಾಷ್ಟ್ರಗಳಲ್ಲಿ ಆರ್ಥಿಕ ಹಿಂಜರಿತವುಂಟಾಗುತ್ತದೆ. ಆದರೆ ಭಾರತ ಯುದ್ಧದ ನಂತರ 4 ನೇ ಶ್ರೀಮಂತ ರಾಷ್ಟ್ರವಾಗಿದೆ. ಭಾರತ ಅಭಿವೃದ್ಧಿಯಾಗಿಲ್ಲವೇ ಎಂದು ಪ್ರಶ್ನಿಸಿದ ಮುಖ್ಯ ಅತಿಥಿ ಚಕ್ರವರ್ತಿ ಸೂಲಿಬೆಲೆಯವರು, ಭಾರತ 6ನೇ ದೊಡ್ಡ ಸ್ಟಾಕ್ ಮಾರ್ಕೆಟ್ ಹೊಂದಿದೆ. 600 ಬಿಲಿಯನ್ ಡಾಲರ್ ವಿದೇಶಿ ವಿನಿಮಯವಿದೆ. 2 ವರ್ಷಗಳ ಕಾಲ ಯುದ್ಧ ನಡೆದರೂ ವಿದೇಶಿ ವಿನಿಮಯ ಹೊಂದಿ ಬಲಿಷ್ಟವಾಗಿದೆ ಎಂದರು. ಶ್ರೀಲಂಕಾಕ್ಕೆ ಬಿಲಿಯನ್ ಗಟ್ಟಲೇ ಸಾಲ ನೀಡಿದ್ದೇವೆ. ಗಾಲ್ವಾನ್ ಪ್ರಕರಣದ ನಂತರ ಚೈನಾಕ್ಕೆ ಧೈರ್ಯವಿಲ್ಲವಾಗಿದೆ. ನಾವು ಆಂತರಿಕವಾಗಿ ಬೆಳೆದಿದ್ದೇವೆ. ಯಾವುದೇ ಕ್ಷೇತ್ರಕ್ಕೆ ಹೋಗಿ ನೋಡಿ ನಿಮಗೆ ನಿಚ್ಚಳವಾಗಿ ಕಾಣುತ್ತೆ.

ಯಾವುದೇ ಕ್ಷೇತ್ರಕ್ಕೆ ಹೋಗಿ ಮಹಿಳೆಯರು ಇದ್ದಾರೆ. ಸ್ವಾವಲಂಬಿಗಳಾಗಿದ್ದಾರೆ. ಮೊನ್ನೆ ಇತ್ತೀಚೆಗೆ ಲಡಾಕ್‌ನಂತಹ ಪ್ರದೇಶಕ್ಕೆ ಹೋಗಿದ್ದೆ. ಅಲ್ಲಿ ಹಲವಾರು ಮಹಿಳಾ ಗುಂಪುಗಳು ಕರ್ನಾಟಕದಿಂದ ಬಂದಿದ್ದರು. ಅವರನ್ನು ನಿಮ್ಮ ಯಜಮಾನರು ಬಂದಿದ್ದಾರಾ ಎಂದು ವಿಚಾರಿಸಿದಾಗ ಇಲ್ಲ ನಾವೇ ಗುಂಪಾಗಿ ಬಂದಿದ್ದೇವೆ ಎಂದರು. ನಮಗೆ ಇನ್ಯಾವ ಭಾರತ ಬೇಕು. ಯುವಾ ಬ್ರಿಗೇಡ್ ಕೊಟ್ಟಿದ್ದೇ ಹೆಣ್ಣು ಮಕ್ಕಳು ಎಂದರು. ಮಹಿಳಾ ಸಬಲೀಕರಣವಾಗಿದೆ. ಧಾರ್ಮಿಕವಾಗಿ ಭಾರತ ಮುಂದುವರೆದಿದೆ. ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಯಾಗುತ್ತಿದೆ.

ಆದರೆ ಭವಿಷ್ಯದ ಭಾರತದ ಬಗ್ಗೆ ಕಳವಳಕಾರಿಯಾಗಿದೆ. ಏಕೆಂದರೆ ಈಗಿನ ತರುಣರಿಗೆ ಯಾವುದರಲ್ಲೂ ಆಸಕ್ತಿಯಿಲ್ಲ. ದು:ಖದ ತಾರುಣ್ಯವಿದೆ. ಉತ್ಸಾಹ ದಿನೇ ದಿನೇ ಕಳೆದುಹೋಗುತ್ತಿದೆ. ಶಕ್ತಿ ಇಲ್ಲ. ಎಸ್.ಎಸ್.ಎಲ್.ಸಿ. ಮಕ್ಕಳಿಗೆ ನಿನ್ನ ಜೀವನದ ಗುರಿ ಏನು ಎಂದು ಕೇಳಿದರೆ ಒಬ್ಬನೂ ಹೇಳಲಿಲ್ಲ. ಹೆಣಗಳು ಕುಳಿತಂತೆ ಕುಳಿತಿದ್ದರು. ಹಾಗಾದರೆ ಭಾರತದ ಭವಿಷ್ಯವೇನು? ಆಲೋಚನೆ ಹಾಗೂ ಪ್ರಶ್ನೆ ಕೇಳುವ ಕೆಲಸ ನಿಂತು ಹೋಗಿದೆ. ಹೇಳಿದಷ್ಟು ಮಾತ್ರ ಮಾಡುತ್ತಾರೆ. ಇವೆಲ್ಲವನ್ನು ಮೊಬೈಲ್ ಮತ್ತು ಕೃತಕ ಬುದ್ಧಿಮತ್ತೆ ಆವರಿಸಿದೆ. ಈ ಕೃತಕ ಬುದ್ಧಿಮತ್ತೆ ಭಾರತವನ್ನು ನಾಶ ಮಾಡುತ್ತದೆ. ನಮ್ಮ ಮಕ್ಕಳು ನಮ್ಮನ್ನು ನಾಶ ಮಾಡುತ್ತಾರೆ. ಬೆಂಗಳೂರು ನಾಶವಾಗುವ ಕಾಲ ದೂರವಿಲ್ಲ.

ಸಾಫ್ಟ್‌ವೇರ್ ಮತ್ತು ಒರೇಕಲ್‌ನಿಂದ ಲಕ್ಷಾಂತರ ಜನರನ್ನು ಹೊರಹಾಕಿದ್ದಾರೆ. ಇದರ ಪರಿಣಾಮ ಭಾರತಕ್ಕೂ ಆಗುತ್ತದೆ. ಬಹಳ ಜಾಗರೂಕರಾಗಿರಬೇಕು. ಕೃತಕ ಬುದ್ಧಿಮತ್ತೆ ಯುದ್ಧದಲ್ಲಿ ಸೈನಿಕರಾಗಿ ದುಡಿಯಬೇಕು. ಸ್ಮಾರ್ಟ್‌ಫೋನ್ ಪಕ್ಕಕ್ಕಿಡಬೇಕು. ಆಗ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಗುತ್ತದೆ ಎಂದು ತಿಳಿಸುತ್ತಾ ತಮ್ಮ ಮಾತನ್ನು ಮುಗಿಸಿ, 79 ನೇ ಸ್ವಾತಂತ್ರ್ಯ ಉತ್ಸವದ ಶುಭಾಶಯಗಳನ್ನು ತಿಳಿಸಿದರು.

ಅಧ್ಯಕ್ಷರಾದ ರೊ.ಆರ್.ಆನಂದರವರು ಮಾತನಾಡಿ, ಕೃತಕ ಬುದ್ಧಿಮತ್ತೆಯ ವಿಷಯವನ್ನು ಹೇಗೆ ಎದುರಿಸಬೇಕು ಎಂದು ಎಚ್ಚರಿಸಿದ್ದೀರಿ. ಅದು ನಮ್ಮನ್ನೇ ಸಾಯಿಸುತ್ತದೆ. ನಾವೇ ಸ್ವತಃ ಗೆಲ್ಲಬೇಕು ಎನ್ನುವುದನ್ನು ತಿಳಿಸಿದ್ದೀರಿ. ಅದಕ್ಕಾಗಿ ಧನ್ಯವಾದಗಳು ಎಂದರು.

ಚಕ್ರವರ್ತಿ ಸೂಲಿಬೆಲೆಯವರಿಗೆ ರೊ.ಪಿಡಿಜಿ. ಡಾ.ಪಿ. ನಾರಾಯಣ್, ರೊ. ಸುನೀತಾ ಶ್ರೀಧರ್, ಅಧ್ಯಕ್ಷರು, ಕಾರ್ಯದರ್ಶಿಗಳು ಸೇರಿ ಸನ್ಮಾನಿಸಿದರು. ಕೊನೆಯಲ್ಲಿ ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿ ಯವರು ಎಲ್ಲರಿಗೂ ವಂದಿಸಿದರು.

ಅಂದಿನ ಉಪಹಾರವನ್ನು ನೀಡಿದ ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ.ಎಂ.ಮಾಧವಾಚಾರ್ ರವರಿಗೂ ಸಹ ವಂದಿಸಿದರು.





**ದಿನಾಂಕ: 15–08–2025, ಶುಕ್ರವಾರದಂದು ರೋಟರಿ ಕ್ಲಬ್ ಶಿವಮೊಗ್ಗದ ಯುವ ಕೇಂದ್ರದಲ್ಲಿ 79ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಿತು. ಅಧ್ಯಕ್ಷರಾದ ರೊ. ಆರ್. ಆನಂದ್, ಕಾರ್ಯದರ್ಶಿ ರೊ. ವಿಶ್ವಾಸ್ ವೈ. ಹಾಗೂ ರೋಟರಿ ಸದಸ್ಯರುಗಳು ಭಾಗವಹಿಸಿದ್ದರು.**

## ಸಂಪಾದಕೀಯ



### ಬಂದಿದ್ದೇವೆ ಎಂದಮೇಲೆ ಹೋಗಿಯೆ ಹೋಗುತ್ತೇವೆ...

ಬಂದಿದ್ದೇವೆ ಎಂದ ಮೇಲೆ ಹೋಗಲೇಬೇಕು. ಅದು ಇಬ್ಬರಲ್ಲಿ ಗಂಡನಿಗೂ ಗೊತ್ತು ಹೆಂಡತಿಗೂ ಗೊತ್ತು...!

ಗಂಡನಿಗೆ ತನ್ನ ಹೆಂಡತಿಯ ಕುರಿತು ಕಾಳಜಿ... ಅವಳು ಎಂದಿಗೂ ಬ್ಯಾಂಕಿಗೆ ಹೋಗಿಲ್ಲ, ಅಂಚೆ ಕಛೇರಿಗೂ ಹೋಗಿಲ್ಲ, ಯಾವುದೇ ಬಿಲ್ಲು ಪಾವತಿಗೂ ಹೋಗಿಲ್ಲ. ವಿಮಾ ಕಛೇರಿಗೆ ಹೋಗಿಲ್ಲ, ಆನ್‌ಲೈನ್ ಬ್ಯಾಂಕಿಂಗ್ ಬರುವುದಿಲ್ಲ... ಇದೆಲ್ಲಾ ಅವಳಿಗೆ ಹೇಗೆ ಸಾಧ್ಯವಾದೀತು?

ಹೆಂಡತಿಗೂ ಗಂಡನ ಚಿಂತೆ... ಬೆಳಗ್ಗೆ ಎದ್ದಾಕ್ಷಣ ಅವರಿಗೆ ಶುಂಠಿ ಏಲಕ್ಕಿ ಚಾ ಬೇಕು ಒಳ್ಳೆಯ ಬಿಸ್ಕತ್ತಿನ ಜೊತೆ. ಅದು ಇಲ್ಲದೆ ಬೆಳಗ್ಗೆಯ ನಡೆದಾಟ ಸಾಧ್ಯವಿಲ್ಲ. ಹಿಂತಿರುವ ಸಮಯಕ್ಕೆ ಬಿಸಿ ಉಪಹಾರ, ಅವರಿಗೆ ಅವರ ಬಟ್ಟೆಗಳೂ ಬೇಗ ಸಿಗುವುದಿಲ್ಲ...! ಮಧ್ಯಾಹ್ನದ ಊಟ, ವಿಶ್ರಾಂತಿ, ಸಂಜೆಯ ಪ್ರತ್ಯೇಕ ಮೆನು. ಎಲ್ಲವೂ ಕ್ರಮದಲ್ಲಿರಬೇಕು. ನಾನಿಲ್ಲದೆ ಹೋದಾಗ ಇದನ್ನೆಲ್ಲ ಅವರು ಹೇಗೆ ನಿಭಾಯಿಸಿಯಾರು?

ಒಂದು ದಿನ ಗಂಡ ಹೆಂಡತಿಯನ್ನು ಬ್ಯಾಂಕಿಗೆ ಕರೆದೊಯ್ದು, ಅವಳಿಂದಲೇ ಎಟಿಎಂ ನಿಂದ ಹಣ ತೆಗೆಸಿದ, ಮದುವೆಯ ದಿನಾಂಕದ ಇನ್ ಹಾಕಿಸಿದ. ಸ್ನೇಹಿತರಿಗೆ ಹೇಳದ ನಾನು ಇಲ್ಲದಿದ್ದರೆ ಸ್ವಲ್ಪ....

ಹೆಂಡತಿಯೂ ಕಾಯಿಲೆಯ ನೆಪದಲ್ಲಿ ಮಲಗಿದಳು, ಪತಿಯಿಂದ ತಿಂಡಿ, ಚಾ ಮಾಡಿಸಿದಳು. ಚೆನ್ನಾಗಿದೆ ಎಂದು ಮೆಚ್ಚುಗೆ ತೋರಿದಳು!!!

ಈಗ ಗಂಡ ತನ್ನ ಹೆಂಡತಿಯನ್ನು ಎಲ್ಲ ಕಡೆ ಕರೆದೊಯ್ದು, ಅಡುಗೆ ಗ್ಯಾಸ್ ಕಾದಿರಿಸುವುದು, ನೋಂದಣಿ, ಬಿಲ್ಲುಗಳ ಪಾವತಿ, ಎಲ್ಲವನ್ನು ತಿಳ ಹೇಳದ. ಪತಿಯಿಂದ ಅನ್ನ, ಸಾರು, ಸಾಂಬಾರು, ಖಿಚಡಿ ಮಾಡಲು ಕಲಿಯಲು ತೊಡಗಿದ...! ಈಗ ಗಂಡನಿಗೆ ಸ್ವಲ್ಪ ಸಮಾಧಾನ, ಹೆಂಡತಿಗೂ...!!

ಸ್ನೇಹಿತರೇ, ಜೀವನದ ಆರಂಭದ ಹಾಗೆ, ಜೀವನದ ಅಂತ್ಯಕ್ಕೂ ಸಾಕಷ್ಟು ಸಿದ್ಧತೆ ಬೇಕು. ಇಲ್ಲದಿದ್ದರೆ ಜೀವನ ಸಂಗಾತಿಗೆ ತುಂಬಾ ತೊಂದರೆ. ಯಾಕೆಂದರೆ ಯಾರ ಸರದಿ ಮೊದಲೋ ? ಯಾರಿಗೂ ತಿಳಿಯದು.

ವೃದ್ಧಾಪ್ಯಕ್ಕೆ ಒಳ್ಳೆಯ ಹೆಸರಿದೆ, ಯಾರೋ ಹೇಳುತ್ತಾರೆ 'ಸನ್ಯಾಸ ಆಶ್ರಮ', ಇನ್ನಾರೋ 'ವಾನಪ್ರಸ್ಥಾಶ್ರಮ' ಎನ್ನುತ್ತಾರೆ. ಆದರೆ ನಾನು 'ಆನಂದಾಶ್ರಮ' ಅನ್ನುತ್ತೇನೆ !

ನೀವು ಮನೆಯಲ್ಲಿದ್ದರೆ, ಒಂದು 'ಆಶ್ರಮ'ದಂತೆ...

ನೀವು ಆಶ್ರಮದಲ್ಲಿದ್ದರೆ 'ಮನೆ'ಯಲ್ಲಿದ್ದಂತೆ... ಸಂತೋಷವಾಗಿರಿ.

ಹಳೆಯ ನೆನಪುಗಳನ್ನು ಮೆಲುಕು ಹಾಕಬೇಡಿ. 'ನಮ್ಮ ಕಾಲದಲ್ಲಿ ಎಂದು' ಹೇಳಬೇಡಿ, ಅವಮಾನವಾದರೆ ತೋರಿಸಬೇಡಿ, ಮಾತು ಉದ್ದಕ್ಕೆ ಎಳೆಯದಿರಿ, ಸಂತೋಷವನ್ನು ಕಾಪಾಡಿ, ಎಲ್ಲರೊಂದಿಗೆ ಸ್ನೇಹದಿಂದಿರಿ...

ಕೋಪ ಮತ್ತು ದುರಾಸೆಯನ್ನು ದೂರ ಓಡಿಸಿ, ಯಾವಾಗಲೂ ಆನಂದ ಅನುಭವಿಸಿ. ವೃದ್ಧಾಪ್ಯವೂ ಒಳ್ಳೆಯದೇ....

ಕನ್ನಡಕದಿಂದ ಚೆನ್ನಾಗಿ ಕಾಣಿಸುತ್ತದೆ, ಹೊಸ ಹಲ್ಲುಗಳಿಂದ ಸುಲಭದಲ್ಲಿ ಅಗಿಯಬಹುದು, ಶ್ರವಣ ಸಾಧನದಿಂದ ಚೆನ್ನಾಗಿ ಕೇಳಿಸುತ್ತದೆ...

ಉದ್ಯಾನಕ್ಕೆ ಹೋಗಿ ಮತ್ತು ಮತ್ತೆ ಹಿಂದುರುಗಿ, ದೇವಸ್ಥಾನಕ್ಕೆ ಹೋಗಿ ಭಜನೆ ಮಾಡಿ, ಮಕ್ಕಳೆದುರು ಸುಮ್ಮನಿರಿ, ಮೊಮ್ಮಕ್ಕಳೊಂದಿಗೆ ಆಟವಾಡಿ, ಸ್ನೇಹಿತರನ್ನು ಕರೆದು ಮಾತನಾಡಿಸಿ, ಮನಸಿದ್ದರೆ ತಿರುಗಾಟಕ್ಕೆ ಹೋಗಿ, ಹಾಡಬೇಕೆನ್ನಿಸಿದರೆ ಹಾಡಿ, ಸ್ವಲ್ಪ ವ್ಯಾಯಾಮ ಮಾಡಿ, ಅಡುಗೆ ಮನೆಯ ಕೆಲಸಕ್ಕೆ ಭಾಗಿಯಾಗಿ, ಮಧುರ ಸಂಗೀತ ಕೇಳಿ, ಚೆನ್ನಾಗಿ ಊಟ ಮಾಡಿ, ಆಯಾಸವಾದರೆ ಕುಳಿತುಕೊಳ್ಳಿ, ಬೇಸರವಾದರೆ ಮಲಗಿ...ಜೀವನದ ಮಜವನ್ನೆಲ್ಲಾ ಲೂಟಿ ಮಾಡಿ...!!

ಎಲ್ಲವನ್ನೂ ಆಸ್ವಾದಿಸುತ್ತ, ಮೆಚ್ಚುತ್ತ, ತೃಪ್ತ ಮನದಿಂದ ಆನಂದ ಅನುಭವಿಸುತ್ತ, ಮೆತ್ತಗೆ ಜಾರಿಹೋಗಿ, ಮಾಗಿದ ಎಲೆಯು ಉದುರಿದ ಹಾಗೆ... ಸದ್ದಿಲ್ಲದೆ ಹೊರಟುಬಿಡಿ...! ಒಂದು ದಿನ...!!

• ರೊ. ಎಂ. ಮಾಧವಾಚಾರ್



ದಿನಾಂಕ: 15-08-2025, ಶುಕ್ರವಾರದಂದು ಆಶಾಕಿರಣ ಬುದ್ಧಿಮಾಂದ್ಯ ಮಕ್ಕಳ ಶಾಲೆಯಲ್ಲಿ 79ನೇ ಸ್ವಾತಂತ್ರ್ಯೋವವನ್ನು ಆಚರಿಸಿತು. ಅಧ್ಯಕ್ಷರಾದ ರೊ. ಆರ್. ಆನಂದ್, ಕಾರ್ಯದರ್ಶಿ ರೊ. ವಿಶ್ವಾಸ್ ವೈ. ಹಾಗೂ ಆಶಾಕಿರಣ ಶಾಲೆಯ ಚೇರ್‌ಮನ್ ರೊ. ಡಿ. ಎಸ್. ನಟರಾಜ್ ಹಾಗೂ ಪ್ರಿನ್ಸಿಪಾಲರಾದ ರೊ. ಡಿ.ಎಲ್. ಮಂಜುನಾಥ್ ಮತ್ತು ರೋಟರಿ ಸದಸ್ಯರುಗಳು ಭಾಗವಹಿಸಿದ್ದರು.

## *Happy Birthday Wishes*

| | | | |
|---|---|---|---|
|  |  |  |  |
| *Lakshmi Anand* *9th Aug* | *Sreedhar N S* *15th Aug* | *Hemavathi S.C.* *16th Aug* | *S.N.Nagaraj* *18th Aug* |




**2. Membership & New Club Development Month**

- Update classification list and fill up the vacancies accordingly.
- Invite non-Rotarians, local personalities and Rotary Alumni to the meeting and emphasise on the advantages of joining Rotary.
- Organise joint meetings with other Rotary Clubs & social organisations.
- Educate members about membership procedure.

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495